ನಾ. ಜ್ಯೋತಿ, ಹೂವಿನಹಡಗಲಿ

ಮನುಷ್ಯ ನಾಯಿಯ ಅನುಯಾಯಿಯೋ ಅಥವಾ ನಾಯಿಯೇ ಮನುಷ್ಯನ ಅನುಯಾಯಿಯೋ?



ಕಚ್ಚಾಟಕ್ಕೆ ಮನುಷ್ಯನೇ ಗುರು; ನಿಷ್ಠೆಗೆ ಮಾನವ ಅನುನಾಯಿ.

ಭಾರತೀ ಗಂಗಾಧರ, ಬೆಂಗಳೂರು

ನಾಯಕರು ಜನರಿಗೆ ಭರವಸೆಯ ಮಹಾಪೂರವನ್ನೇ ಹರಿಸುತ್ತಿದ್ದಾರಲ್ಲ, ರಾಜ್ಯದ ಭವಿಷ್ಯ?

ಹಿರಣ್ಣಯ್ಯನವರೇ ಹೇಳುತ್ತಿದ್ದಂತೆ 'ಅಗ್ರಿಷ್ಟ್ ಕೋಟಿ; ಇಗ್ರಷ್ಟ್ ಕೋಟಿ; ಖಜಾನೆ ಲೂಟಿ; ನಮ್ಗೆ ನಿಮ್ಗೆ ಲಂಗೋಟಿ!'

ಪಿ.ಜೆ. ರಾಘವೇಂದ್ರ, ಮೈಸೂರು

ಉಚಿತ ಉಚಿತವೆ?

ದುರ್ಬಲರಿಗೆ ಮಾತ್ರ. ಮಿಕ್ಕಂತೆ ಅದು ಅಭಿಮಾನಹೀನರನ್ನು ತಯಾರಿಸುವ ಕಾರ್ಖಾನೆ.

ಮಲ್ಲಿಕಾರ್ಜುನ, ಸುರಧೇನುಪುರ

ಒಗ್ಗಟ್ಟಿನಲ್ಲಿ ಬಲವಿದೆ. ಒಗ್ಗಟ್ಟಿನ ಮಂತ್ರದಲ್ಲಿ?



ಹಂಬಲವಿದೆ.

ಸುಮನಾ, ತೆಲಂಗಾಣ

ಕಪ್ಪು ಹಣ, ಬಿಳಿ ಹಣ ಇರುವಂತೆ ಕಪ್ಪು ನೆರಳು, ಬಿಳಿ ನೆರಳು ಇದ್ದರೆ ಹೇಗಿರುತ್ತಿತ್ತು?

ಈಗಲೂ ಇದೆ; ಬಿಳಿಯ ನೆರಳನ್ನೇ (Phosphorescence) ದೆವ್ವ ಎಂದು ನಂಬಿದರು.

ಜಗದೀಶ ಬಿ. ಹೊಸೂರು, ಮೈಸೂರು

ಭ್ರಷ್ಟಾಚಾರ ಮಾಡುವವ, ಮಾಡಿಸುವ; ಇವರಲ್ಲಿ ಯಾರು ನಿಜವಾದ ಭ್ರಷ್ಟಾಚಾರಿ?

ಮಾಡಿಸುವವನೇ; ಕೋರ್ಸೇ ಇಲ್ಲದಿದ್ದರೆ ಡಾಕ್ಟ್ರೇಟ್ ಎಲ್ಲಿಂದ ದೊರೆತೀತು!

ಬಿ.ಆರ್. ಉಷಾ, ಬೆಂಗಳೂರು

ಲೋಕಸಭಾ ಚುನಾವಣೆಯಲ್ಲಿ ಪಕ್ಷಗಳು ಹೆಂಗಸರಿಗೆ ವಿಮಾನದಲ್ಲಿ ಫ್ರೀ ಕೊಡ್ತಾರಾ?

ಅಷ್ಟೇ ಏಕೆ, ಅಂತಿಮ ಪ್ರಯಾಣಕ್ಕೂ ಮಡಕೆ ಫ್ರೀ ಕೊಡುವ ಯೋಚನೆಯಿದೆಯಂತೆ.

ಅಂಚೆ ಸುಬ್ರಹ್ಮಣ್ಯ, ಕೊಪ್ಪ

ತೀರ್ಥಯಾತ್ರೆಗೆ ಹೋಗುವಾಗ ಅಥವಾ ಬರುವಾಗ ಹೆಚ್ಚಿನ ಸಾವು ಸಂಭವಿಸುವುದೇಕೆ?

ಯಮನು 'ತೀರಿತು ಯಾತ್ರೆ' ಎಂದು ಕೇಳಿಸಿಕೊಂಡ ಫಲವಂತೆ.

ಬಿ. ಚಂದ್ರೇಗೌಡ, ಬೆಂಗಳೂರು

ನೆರೆಹೊರೆಯವರನ್ನು ಪ್ರೀತಿಸು ಎಂದು ಏಸು ಹೇಳಿದ್ದೇಕೆ?

ನಿಮ್ಮ ಕಾಂಪೌಂಡಿಗೆ ಕಸ ಎಸೆಯದಿರಲಿ, ನಿಮ್ಮ ವಿರುದ್ಧ ಗಾಳಿಸುದ್ದಿ ಹರಡದಿರಲೆಂದಿರಬಹುದು.

ಎನ್. ವೈದೇಹಿ, ಮೈಸೂರು

ಕೂಡುಕುಟುಂಬಗಳು ಮುಂದೆ ಮತ್ತೆ ಮರುಕಳಿಸಬಹುದೆ?

ಸರ್ಕಾರವು 'ಕೂಡುಕುಟುಂಬಗಳಿಗೆ ತ್ರೀ ಬೆಡ್ರೂಮ್ ಫ್ಲ್ಯಾಟ್ ಉಚಿತ' ಎಂದರೆ ಸಾಕು!

ಚಿಕ್ಕೋಬನಹಳ್ಳಿ ಚಾಂದ್ ಬಾಷಾ, ತಳಕು

ಮುಂದಿನ ಚುನಾವಣೆಗಳಲ್ಲಿ ಯಾವ ಗ್ಯಾರಂಟಿಗಳು ಬರಬಹುದು?

ಕುಡುಕರಿಗೆ ಉಚಿತ ಮದ್ಯ; ಮಧ್ಯರಾತ್ರಿಯಲ್ಲಿ ಮನೆ ತಲುಪಿಸಲು ವಾಹನ ವ್ಯವಸ್ಥೆ...

ನಾರಾಯಣ ಯಾಜಿ, ಶಿರಾಲಿ

ಇನ್ನು ಐವತ್ತು ವರ್ಷಗಳಲ್ಲಿ ನಮ್ಮ ದೇಶದ ಹೆಸರೇ 'ಬದಲ್' ಆಗುವುದಂತೆ?

ಗುಡ್! ಆ ಹೊತ್ತಿಗೆ ನೇತಾಗಳು ದೇಶವನ್ನು ಹೇಳಹೆಸರಿಲ್ಲದಂತಾಗಿಸುವರೇನೋ ಎಂದು ಹೆದರಿದ್ದೆ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಮನುಷ್ಯನಿಗೆ ತಾಳ್ಮೆ ಇಲ್ಲದಿದ್ದರೆ ಏನಾಗುತ್ತದೆ ಗುರುಗಳೇ?

ಹತ್ತಿರದ ವೈದ್ಯ, ನರ್ಸಿಂಗ್ ಹೋಂ, ಮೆಡಿಕಲ್ ಸ್ಟೋರ್‌ಗಳಿಗೆ ಶುಕ್ರದೆಸೆ.

## ಬಹುಮಾನಿತ ಪ್ರಶ್ನೆ

ಸಂತೋಷ, ಅಥಣಿ

ಅಧಿಕಾರಕ್ಕೂ, ಅಹಂಕಾರಕ್ಕೂ ವ್ಯತ್ಯಾಸ?

ಅಧಿಕಾರ ಪಟ್ಟ ಇರುವವರಿಗೆ. ಅಹಂಕಾರ ಚಟ್ಟದವರೆಗೆ.

ಕೆ. ಪುರುಷೋತ್ತಮ ರೆಡ್ಡಿ, ಪಾವಗಡ

ಐದೂ ಭಾಗ್ಯಗಳನ್ನು ಪಡೆಯುತ್ತಿರುವ ಕುಟುಂಬ ತನ್ನದೆಂದು ಅವನು ಸಂಭ್ರಮದಲ್ಲಿದ್ದ. ವಿಶ್ ಮಾಡಿ ರಾಮ್ಸ್?

ಇವೆಲ್ಲ ಭಾಗ್ಯಗಳನ್ನು ಸ್ವೀಕರಿಸಲು ಪ್ರೇರೇಪಿಸಿದ ಬಡತನವು ತೊಲಗಲೆಂದು ಆಶಿಸುವೆ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಎತ್ತರದ ಸ್ಥಾನದಲ್ಲಿರುವವರು ಒಂದಿಲ್ಲೊಂದು ದಿನ ಕೆಳಗೆ ನೋಡಲೇಬೇಕಲ್ಲವೆ ಸಾರ್?

ಆದರೆ ಹದ್ದಿನಂತೆ ಎರಗಲು ನೋಡದೆ ಮೋಡದಂತೆ ಹಸಿರಾಗಿಸಲು ನೋಡುವುದು ಒಳಿತು.

ಎಚ್.ಎಂ. ಅನಂತಪದ್ಮನಾಭ, ಮೈಸೂರು

ಬರೆಯದೆ ಬದುಕಿದವರಿಗೂ, ಬರೆದಂತೆ ಬದುಕಿದವರಿಗೂ ವ್ಯತ್ಯಾಸವೇನು?



ಇವರು ಕಥೆಯಾದರು (ಸಾಲುಮರದ ತಿಮ್ಮಕ್ಕ). ಅವರು ದಂತಕತೆಯಾದರು (ಮಾಸ್ತಿ).

ಹೆಚ್.ವಿ. ಶ್ರೀಧರ್, ಬೆಂಗಳೂರು

ಬಸ್ಸಿನಲ್ಲಿ ಅತ್ತೆ–ಸೊಸೆ ಇಬ್ಬರೂ ಹೋದರೆ ಇಬ್ಬರಿಗೂ ಫ್ರೀನಾ? ಯಾರು ಟಿಕೆಟ್ ತೊಗೋಬೇಕು?

ಬಸ್ಸಿನ ಮಾತು ಅಂತಿರಲಿ. ಅತ್ತೆಯೇ 'ಟಿಕೆಟ್' ತೆಗೆದುಕೊಳ್ಳಲಿ ಎಂದು ಸೊಸೆಯ ಆಸೆ ಇದ್ದೀತು.

■ ರಾಮ್